# ಪ್ರಾರ್ಥನೆ

'ತಾಸುಗಟ್ಟಳೆ ಕೂತು ಪ್ರಾರ್ಥನೆ ಮಾಡುವುದಕ್ಕಿಂತ ಅರಿಯದವರ ನಡುವೆ ಕೂತು ಅರಿವು ಮೂಡಿಸುವ ಕೆಲಸ ಹೆಚ್ಚು ಸಾರ್ಥಕವಾದುದು' ಎನ್ನುತ್ತದೆ ಕುರಾನ್. ಕುರಾನಿನ ಈ ಮಾತು ವ್ಯಕ್ತಿಯ ನಿಜವಾದ ಕರ್ತವ್ಯಮುಖತೆಯನ್ನು ನಿರ್ದೇಶಿಸುತ್ತದೆ ಹಾಗೂ ವ್ಯಕ್ತಿ ವಿಕಾಸಕ್ಕಿಂತ ಸಮುದಾಯ ವಿಕಾಸ ದೊಡ್ಡದೆಂದು ತಿಳಿಸುತ್ತದೆ. ಏಕೆಂದರೆ ವ್ಯಕ್ತಿಯು ಸಮುದಾಯದ ಒಂದು ಘಟಕ ಮಾತ್ರ. ಅವನ ವಿಕಾಸ ಮಾತ್ರದಿಂದ ಸಮುದಾಯದ ವಿಕಾಸ ಸಾಧ್ಯವಾಗದು. ಒಂದು ವೇಳೆ ವ್ಯಕ್ತಿ ವಿಕಾಸವೇ ಅತಿಮುಖ್ಯವೆಂದು ಭಾವಿಸಿ, ಆ ದಿಕ್ಕಿನಲ್ಲಿ ಸಾಧನೆ ಮಾಡ ಹೊರಟರೆ ಸಮಾಜದಿಂದ ವ್ಯಕ್ತಿ ಹೊರಗೆ ನಿಂತು ಬೆಳೆಯಬೇಕಾಗುತ್ತದೆ. ಆಗ ಸಮಾಜದಲ್ಲಿ ಬೌದ್ಧಿಕ ಬೆಳವಣಿಗೆ ಅಸಮವಾಗುತ್ತದೆ. ಆಗ ತಿಳಿದವನು ಅತಿ ಗಣ್ಯನೆಂತಲೂ, ತಿಳಿಯದವರು ಸಾಮಾನ್ಯರೆಂತಲೂ ಪರಿಗಣಿತವಾಗಿ ಸಾಮಾಜಿಕ ಅಸಮಾನತೆ ಸೃಷ್ಟಿಯಾಗುತ್ತದೆ. ಇದೇ ಕಾರಣದಿಂದ ಜ್ಞಾನ ಮತ್ತು ಬುದ್ಧಿಯ ಆಸ್ತಿ ನಿರ್ಮಾಣವಾಗಿ ಕೇವಲ ಕೆಲವು ಮಂದಿ ಸಮಾಜವನ್ನು ತಮ್ಮ ಬೌದ್ಧಿಕ ಬಲದಿಂದ ನಿಯಂತ್ರಿಸಲಾರಂಭಿಸುತ್ತಾರೆ. ಈ ರೀತಿಯ ಸ್ಥಿತಿ ನಿರ್ಮಾಣವಾಗಬಾರದು; ಸಮಾಜ ಅರಿವಿನ ನೆಲೆಯಲ್ಲಿ ಸಮಾನವಾಗಿ ಚಲಿಸುವ ಸ್ಥಿತಿಯಲ್ಲಿದ್ದರೆ ಬೌದ್ಧಿಕ ಶೋಷಣೆ ನಡೆಯಲಾರದು ಎಂಬುದು ಕುರಾನಿನ ಮಾತಿನ ಆಶಯ.

ಇಸ್ಲಾಂಮಿನಲ್ಲಿ ಪ್ರಾರ್ಥನೆಗೆ ಸ್ಥಾನವಿಲ್ಲವೆಂಬುದು ಈ ಮಾತಿನ ಅರ್ಥವಲ್ಲ. ಆದರೆ ಅದು ಇರಬೇಕಾದ ಸ್ಥಾನವನ್ನು ತಿಳಿಸುವ ಸೂಚನೆಯಿದು. ಇಸ್ಲಾಂ ಧರ್ಮದಲ್ಲಿ ಶಬ್ದಕ್ಕಿಂತ ಮೌನಕ್ಕೆ ಹೆಚ್ಚು ಆದ್ಯತೆಯಿದೆ; ಆಕಾರಕ್ಕಿಂತ ನಿರಾಕಾರಕ್ಕೆ ಹೆಚ್ಚು ತೂಕವಿದೆ. ನಮ್ಮ ವಚನಕಾರರು, ಮುಖ್ಯವಾಗಿ ಅಲ್ಲಮಪ್ರಭುವಿನಂಥವರು ಈ ನಿಲವಿಗೆ ಹತ್ತಿರದವರಾಗುತ್ತಾರೆ. ತಮ್ಮ ಉದ್ಧಾರದ ಜೊತೆ ಜೊತೆಗೆ ಇಡೀ ಸಮುದಾಯದ ಉದ್ಧಾರವನ್ನು ಬಯಸುವ ಕಾಯಕ ಗಮ್ಯ ಕ್ರಮ ಇವರದು. ಬಹುಶಃ ನಿಜವಾದ ಅಧ್ಯಾತ್ಮದ ನಿರೀಕ್ಷಿತ ಗುರಿ ಇದೇ ಆಗಿರಬೇಕು.

ಭಾರತೀಯರು ಮಧ್ಯಕಾಲೀನ ಯುಗದಿಂದ ಭಕ್ತಿಪಂಥದ ಪ್ರಭಾವಕ್ಕೆ ಹೆಚ್ಚು ಒಳಗಾದವರು. ಚಿಂತನ ಪ್ರಧಾನ ನೆಲೆಯಿಂದ ನಂಬಿಕೆಯ ನೆಲೆಯ ಭಕ್ತಿ ಮಾರ್ಗದಲ್ಲಿ ಹೆಜ್ಜೆಯಿಡಲಾರಂಭಿಸಿದರು. 'ನಂಬಿ ಕರೆದರೆ ಓ ಎನ್ನನೇ?' ಎಂಬ ನಂಬಿಕೆಯ ಆಧಾರದ ಪೂಜೆ–ಪ್ರಾರ್ಥನೆಗಳು ಆರಾಧನಾ ವಿಧಿಯಲ್ಲಿ ಪ್ರಾಮುಖ್ಯತೆ ಪಡೆದವು. ಪ್ರಾರ್ಥನೆಯನ್ನು ಮನಪೂರ್ವಕವಾಗಿ, ಭಕ್ತಿಪೂರ್ವಕವಾಗಿ, ತನ್ಮಯವಾಗಿ ಮಾಡಬೇಕು; ದೈವನಿಷ್ಠೆ ಇರಬೇಕು. ಈ ಶ್ರದ್ಧೆಯ ಪ್ರಾರ್ಥನೆಯಿಂದ ಇಷ್ಟಾರ್ಥಗಳು ಸಿದ್ಧಿಸುತ್ತದೆ ಎಂಬ ನಂಬಿಕೆಯಿದೆ.

ಅಂದರೆ ಪ್ರಾರ್ಥನೆಯ ಉದ್ದೇಶವೇನು?– ಎಂಬ ಪ್ರಶ್ನೆ ಏಳುತ್ತದೆ. ಭಕ್ತಿಯೆಂಬುದು ವಿರಾಗಕ್ಕೆ ಪ್ರೇರಕವಾಗಬೇಕು. ಲೌಕಿಕ ರಾಗಗಳನ್ನು–ಭೌತಿಕ ಆಸೆಗಳನ್ನು ಸಿದ್ಧಿಸಿ ಕೊಡುವ ಸಾಧನವಾಗಬಾರದು. ಅತಿ ಎತ್ತರದ ಚಿಂತನಶೀಲ ನೆಲೆಯ ಅಧ್ಯಾತ್ಮಿಕ ನೆಲೆಗೇರುವ ವ್ಯಕ್ತಿಗೆ ಲೌಕಿಕ ಬಯಕೆಗಳೇ ಇರುವುದಿಲ್ಲ. ಅವನ ಬಯಕೆ–ಪ್ರಾರ್ಥನೆ ಏನಿದ್ದರೂ ಲೋಕ ಕಲ್ಯಾಣವೇ ಆಗಿರುತ್ತದೆ. ಏಸು, ಬುದ್ಧ ಅಂಥವರು. ಆದರೆ ನಾವು ಭಾರತೀಯರು– ಸದಾ ನಮ್ಮ ಸ್ವಾರ್ಥ ಈಡೇರಿಕೆಗೆ ಪ್ರಾರ್ಥನೆಯ ಮೊರೆ ಹೋಗುವುದು ಅಧಿಕ. ನಮಗೇ ಒಳ್ಳೆಯದಾಗಲಿ, ಪರೀಕ್ಷೆಯಲ್ಲಿ ಪಾಸಾಗಲಿ, ಅಪಘಾತವಾಗದಿರಲಿ, ಒಳ್ಳೆಯ ಗಂಡ–ಹೆಂಡತಿ–ಸೊಸೆ/ಅಳಿಯ ಸಿಗಲಿ, ಶತ್ರು ನಾಶವಾಗಲಿ, ಲಾಟರಿ ಹೊಡೆಯಲಿ... ಹೀಗೆ ಸಾಗುತ್ತದೆ. ನಮ್ಮ ಬಹುಪಾಲು ಪ್ರಾರ್ಥನೆಗಳ ಅಂತರಾತ್ಮ!

ಲೋಕ ಕಲ್ಯಾಣಕ್ಕಾಗಿ ಪ್ರಾರ್ಥನೆಗಳು ನಡೆಯುವುದಿಲ್ಲ ಎಂದು ನಾನು ಹೇಳಲಾರೆ. ಮಳೆಯಾಗಲಿ, ಬೆಳೆಯಾಗಲಿ, ಭೂಕಂಪ–ಅಗ್ನಿಪರ್ವತ–ಜ್ವಾಲಾಮುಖಿ ಗಳಾಗದಿರಲಿ... ಹೀಗೆ ಒಳ್ಳೆಯದಾಗಲೆಂದು ಮಾಡುವ ಅರ್ಚನೆಗಳು ಪ್ರಾರ್ಥನೆಗಳು ಆಧುನಿಕ ವಿಜ್ಞಾನ ಯುಗದಲ್ಲಿ ಅಧಿಕವಾಗಿವೆ... ಆದರೆ ಇವು ಕೂಡ ಸಮುದಾಯ ಭಯ ಮೂಲದಿಂದಲೇ ಉದ್ಭವಿಸಿದ ಪ್ರಾರ್ಥನೆಗಳು ಎಂಬುದನ್ನು ಮರೆಯಲಾಗದು. ಕೆಟ್ಟದ್ದಾಗಬಾರದು ಎಂದು ಆಶಿಸುವುದು– ಅದನ್ನು ಅಮೂರ್ತ ಶಕ್ತಿಗೆ ಪ್ರಾರ್ಥನೆ ಮೂಲಕ ಕೋರಿಕೊಳ್ಳುವುದು ತಪ್ಪಲ್ಲ. ಅದು ಮಾನವನಲ್ಲಿರುವ ಸ್ಪಂದನೆ ಮತ್ತು ಮಾನವತೆಯನ್ನು ತೋರುವ ಅಭಿವ್ಯಕ್ತಿಯಾಗುತ್ತದೆ. ಆದರೆ ಪ್ರಕೃತಿ ವಿಕೋಪಗಳು ಪ್ರಾರ್ಥನೆಯಿಂದ ಶಮನವಾಗಲಾರವು ಎಂಬ ವಿವೇಚನೆ ನಮ್ಮಲ್ಲಿರಬೇಕು. ಈ ವಿಕೋಪಗಳಿಗೆ ನಮ್ಮ ಸ್ವಾರ್ಥ ಸಾಧನಗಳು ಎಷ್ಟು ಕಾರಣವೆಂಬುದನ್ನು ಕೂಡ ನಾವು ವಿಮರ್ಶಿಸಬೇಕು.

ಪ್ರಾರ್ಥನೆ ಧ್ಯಾನವಾಗಿ ಪರಿವರ್ತಿತವಾಗಬೇಕು; ಸದ್ದು ಮೌನವಾಗಬೇಕು; ಸ್ವಾರ್ಥ ನಾಶವಾಗಿ ಸಮುದಾಯದ ಪ್ರತೀಕವಾಗಿ ಆತ್ಮ ನಿಲ್ಲಬೇಕು. ಅದನ್ನು ಸುಸ್ಥಿರಗೊಳಿಸಲು ಬೇಕಿರುವುದು ಭಾವೋತ್ಕರ್ಷವಲ್ಲ– ಅದರ ಬದಲು ಭಾವನಿಗ್ರಹ! ಮತಿ ವಿಕಲರಂತೆ ಚಂಚಲಗೊಳ್ಳುವುದಲ್ಲ– ಅದರ ಬದಲು ಸಮಚಿತ್ತ–ಸಮಭಾವದ ನೆಲೆಯಿಂದ ಲೋಕಭಾವ–ಲೋಕ ಚಿತ್ತದಲ್ಲಿ ಒಂದಾಗುವ ಪರಿಕ್ರಮ.

**–ಶಿಕಾಕು**

## ಮಾತೇ ಮುತ್ತು

★ ಸುಳ್ಳು ಹೇಳಲು ಬುದ್ಧಿವಂತಿಕೆ ಬೇಕು. ದಡ್ಡ ಪ್ರಾಮಾಣಿಕನಾಗಿರುವುದೇ ಲೇಸು.

–ಗಾದೆ

★ ದೇವರ ದೃಷ್ಟಿಯಲ್ಲಿ ಎಲ್ಲ ರೀತಿಯ ಸೇವೆಯೂ ಒಂದೇ ದರ್ಜೆಯದು.

–ರಾಬರ್ಟ್ ಬ್ರೌನಿಂಗ್

★ ಶಿಷ್ಟರ ಸಂಗವ ಮಾಡದಿದ್ದರೆ ಎನಗೆ ಆಣೆ ರಂಗ, ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೆ.

–ಪುರಂದರದಾಸ

★ ಬುದ್ಧನು ಕಲ್ಪಿಸಿದಂಥ ಯಾವುದೇ ವರ್ಗ ಹಿತಾಸಕ್ತಿಯಿಲ್ಲದ– ಸರ್ವಹಿತಕ್ಕಾಗಿ ತೊಡಗಲು ಮುಕ್ತರಾದಂಥ– ಶುದ್ಧ ಬುದ್ಧಿಜೀವಿ ವರ್ಗ ಎಲ್ಲೂ ಇಲ್ಲ.

–ಬಿ.ಆರ್.ಅಂಬೇಡ್ಕರ್

★ ಮನಶಾ ದುಃಖ ಬೇಕಾದಷ್ಟ ತಡಕೋಬಹುದು. ಆದರ ಸುಖಾ ತಡಕೊಳ್ಳೋದು ಬಾಳ ಕಷ್ಟ.

–ದ.ರಾ.ಬೇಂದ್ರೆ

★ ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ, ದುರ್ಜನರ ಸಂಗದೊಡನಾಟ ಬಚ್ಚಲಿನ ರೊಚ್ಚಿನಂತಿಹುದು.

–ಸರ್ವಜ್ಞ

★ ನಿನಗೆ ನೀನೇ ಕೊಡಬಹುದಾದ ಮೆಚ್ಚಿನ ಕಾಣಿಕೆ 'ಸ್ನೇಹಿತ.'

–ಅರಿಸ್ಟಾಟಲ್

★ ನಮಗೆ ಸ್ನೇಹಿತರು ಬೇಕಾದರೆ ನಾವು ಸ್ನೇಹಿತರಾಗಿರಬೇಕು.

– ಎಮರ್‌ಸನ್

★ ಸ್ನೇಹಸೌಧವನ್ನು ಸದಾಕಾಲ ರಿಪೇರಿ ಮಾಡುತ್ತಿರಬೇಕು.

–ಜಾನ್‌ಸನ್

★ ಸ್ನೇಹ ಎನ್ನುವುದು ರೆಕ್ಕೆ ಇಲ್ಲದ ಪ್ರೇಮವೇ.

–ಲಾರ್ಡ್ ಬೈರನ್

★ ನಗು ಸ್ನೇಹಕ್ಕೆ ಒಳ್ಳೆಯ ಆರಂಭ; ಅಲ್ಲದೆ ಸ್ನೇಹದ ಅತ್ಯುತ್ತಮವಾದ ಮುಕ್ತಾಯ ಸಹ ಅದೇ.

–ಆಸ್ಕರ್ ವೈಲ್ಡ್

★ ಸುಖ ಸ್ನೇಹಿತರನ್ನು ಕರೆ ತರುತ್ತದೆ; ಕಷ್ಟ ಅವರ ಅರ್ಹತೆಯನ್ನು ಪರೀಕ್ಷಿಸುತ್ತದೆ.

–ಪಬ್ಲಿಯಸ್ ಸೈರಸ್

★ ಸ್ನೇಹ ದುಃಖವನ್ನು ಕಡಿಮೆ ಮಾಡುತ್ತದೆ; ಸುಖವನ್ನು ಇಮ್ಮಡಿಗೊಳಿಸುತ್ತದೆ.

–ಫ್ರಾನ್ಸಿಸ್ ಬೇಕನ್

★ ಅದೃಷ್ಟ ನಮ್ಮ ಬಂಧುಗಳನ್ನು ತಂದರೆ, ಆಯ್ಕೆ ಸ್ನೇಹಿತರನ್ನು ತರುತ್ತದೆ.

–ಜೆ.ಡಿ.ಲೈಲಿ

★ ಸ್ನೇಹಿತ ಅನುಕೂಲವಾಗಿದ್ದಾಗ ಆಹ್ವಾನ ಬಂದರೆ ಹೋಗು; ಸ್ನೇಹಿತನಿಗೆ ಅನಾನುಕೂಲವಾದರೆ ಆಹ್ವಾನ ಇಲ್ಲದೆಯೂ ಹೋಗು.

–ಸ್ವೀಡಿಶ್ ಗಾದೆ